# ಸೀತಾಪುರಕ್ಕೆ ಬಂದ ಆಗಂತುಕ

## 1

ಮುಂಬೈಯಿಂದ ವೇಗವಾಗಿ ಬಂದ ಬಸ್ ಸವಣೂರಿನ ಶೆಣ್ಯೈ ಮಾಮನ ಅಂಗಡಿ ಪಕ್ಕ ನಿಂತಿತು. ಬಸ್ಸಿನಿಂದ ತ್ವರಿತವಾಗಿ ಇಳಿದ ಸಂಜಯ್ ಆಚೆ ಈಚೆ ನೋಡಿದ. ಶೆಣ್ಯೈ ಮಾಮ ಸಂಜಯನನ್ನು ನೋಡಿದವರೇ ಅಂಗಡಿಯಿಂದ ಹೊರಗೆ ಬಂದು, 'ನಮಸ್ಕಾರ, ಎಲ್ಲಿಗೆ ಹೋಗಬೇಕು ಮಾರಾಯ್ರೆ?' ಅಂತ ಕೇಳಿದರು.

ಸಂಜಯ್ ಶೆಣ್ಯೈ ಮಾಮನನ್ನು ನೋಡಿ 'ಸೀತಾಪುರಕ್ಕೆ ಹೇಗೆ ಹೋಗಬೇಕು ಹೇಳ್ತೀರಾ?' ಅಂತ ಕೇಳಿದ.

ಶೆಣ್ಯೈ ಮಾಮ 'ಸೀತಾಪುರವ... ಯಾರಲ್ಲಿಗೆ ಮಾರಾಯ್ರೆ?' ಕೇಳಿದರು.

ಈ ಮನುಷ್ಯನಿಗೆ ಬೇಡದ ಕೆಲಸ, ಆದರೆ ಏನು ಮಾಡುವುದು ಇವನ ಸಹಾಯ ಬೇಕಲ್ಲ ಅಂತ ಎಣಿಸಿಕೊಂಡ ಸಂಜಯ್ 'ನನಗೆ ಶಾಸ್ತ್ರಿಗಳ ಮನೆಗೆ ಹೋಗ್ಬೇಕು. ಹೇಳ್ತೀರಾ?' ಅಂದ.

ಶೆಣ್ಯೈ ಮಾಮ 'ಶಾಸ್ತ್ರಿಗಳಾ ? ಅದೇನು ಮಾರಾಯ್ರೆ? ಆರೋಗ್ಯ ಸರಿಯಿಲ್ಲವಾ? ಅವ್ರು ಔಷಧ ಕೊಟ್ರು ಅಂದ್ರೆ ಎಂತ ಕಾಯಿಲೆ ಕೂಡ ಮಾಯ' ಅಂತ ಅಂದರು.

ಸಂಜಯನಿಗೆ ಸಿಟ್ಟು ಬಂತು ಆದರೂ ತೋರಿಸದೆ 'ಅವರನ್ನು ನೋಡ್ಬೇಕಿತ್ತು ಈ ರಸ್ತೆ ಹೋಗ್ತದಾ?' ಅಂತ ಹೇಳುತ್ತಾ ಕೈ ತೋರಿಸಿದ.

ಈಗಿನ ಹುಡುಗರೇ ಹೀಗೆ... ಯಾವುದಕ್ಕೂ ತಾಳ್ಮೆ ಇಲ್ಲ ಅಂತ ಅಂದುಕೊಂಡು ಶೆಣ್ಯೈ ಮಾಮ 'ನೋಡಿ, ಈ ರಸ್ತೆಯಲ್ಲಿ ಒಂದರ್ಧ ಕಿಲೋಮೀಟರು ಹೋದ್ರೆ ಸೀತಾನದಿ ಬರ್ತದೆ. ಈಗ ನೀರಿಲ್ಲ. ಅದನ್ನು ನಡೆದುಕೊಂಡು ದಾಟಬಹುದು. ಅದು ದಾಟಿದರೆ ಒಂದು ಗುಡ್ಡ ಬರ್ತದೆ. ಅದನ್ನು ಹತ್ತಿ ಇಳಿದರೆ ಸೀತಾಪುರವೇ. ಪುರ ಅಂದ್ರೆ ಪೇಟೆ ಇದೆ ಅಂತ ಎಣಿಸಬೇಡಿ. ಸೀತಾಪುರ ಒಂದು ಹಳ್ಳಿ. ಒಂದುವೇಳೆ ನದಿ ದಾಟಿದ ನಂತರ ದಾರಿ ಗೊತ್ತಾಗದಿದ್ರೆ ಅಲ್ಲೇ ಪೊರ್ಬುಗಳ ಮನೆ ಇದೆ. ಕೇಳಿ'ಎನ್ನುತ್ತಾ 'ಅಂದಹಾಗೆ ಎಳನೀರು ಏನಾದ್ರು ಬೇಕಾ?' ಅಂತ ಕೇಳಿದರು.

'ಬೇಡ' ಹೇಳಿ ಬೆನ್ನಿಗೆ ಬ್ಯಾಗ್ ಹಾಕಿ ಸಂಜಯ್ ಸೀತಾಪುರಕ್ಕೆ ಹೊರಟೇಬಿಟ್ಟ. ಕಚ್ಚಾರಸ್ತೆಯ ಎರಡೂ ಬದಿಯಲ್ಲಿ ಇನ್ನೇನು ಸ್ವಲ್ಪ ದಿನ ಹೋದರೆ ಈ ರಸ್ತೆಯನ್ನೇ ತಿಂದು ಬಿಡುವಂತಹ ಮರಗಳು. ಸಂಜಯನಿಗೆ ಇದು ಹೊಸ ಪ್ರಪಂಚ.

ಸಂಜಯ್ ಅಮೆರಿಕದಲ್ಲೇ ಹುಟ್ಟಿ ಬೆಳೆದದ್ದು. ಅವನಿಗೆ ಭಾರತವೇ ಹೊಸದು. ಅದರಲ್ಲೂ ಸೀತಾಪುರ ಮತ್ತು ಕಾಡು ಅವನಿಗೆ ವಿಚಿತ್ರ ಕಾಣತೊಡಗಿದವು. ಹುಟ್ಟಿದಮೇಲೆ ಆತ ಈ ತರದ ಕಾಡು ನೋಡಿಲ್ಲ. ಸೆಖೆ ಬೇರೆ ಶುರುವಾಗಿತ್ತು. ಬೆನ್ನ ಮೇಲೆ ಬ್ಯಾಗ್ ಇತ್ತು. ಅವನ ಶೂಸ್ ಈ ತರದ ರಸ್ತೆಗೆ ಹೇಳಿಸಿರಲಿಲ್ಲ. ಸಂಜಯ್ ಬೇಗ ಬೇಗನೆ ನಡೆಯತೊಡಗಿದ. ಸ್ವಲ್ಪ ದೂರದಲ್ಲಿ ಬತ್ತಿ ಹೋದ ನದಿ ಕಂಡಿತು.

ಅಬ್ಬಬ್ಬಾ ಕೊನೆಗೂ ನದಿ ಬಂತು ಅಂತ ಹೇಳುತ್ತಾ ನದಿಯನ್ನು ದಾಟಲು ಶುರು ಮಾಡಿದ. ನದಿ ದಾಟಿದ ಮೇಲೆ ಇನ್ನೊಂದು ಸಮಸ್ಯೆ. ಈವರೆಗೆ ಬರುತ್ತಿದ್ದ ಕಾಲುದಾರಿ ಕಾಣೆ. ಎದುರಿಗೆ ದೊಡ್ಡ ಗುಡ್ಡ. ಸಂಜಯನಿಗೆ ಏನು ಮಾಡಬೇಕೆಂದು ಗೊತ್ತಾಗಲಿಲ್ಲ. ಅಷ್ಟೊತ್ತಿಗೆ ಅವನಿಗೆ ಶೆಣ್ಯೈ ಮಾಮ ಹೇಳಿದ ಮಾತು ನೆನಪಾಯ್ತು. ಆಚೆ ಈಚೆ ನೋಡಿದ. ಎಲ್ಲಿದೆ ಪೊರ್ಬುಗಳ ಮನೆ? ಸ್ವಲ್ಪ ದೂರದಲ್ಲಿ ಒಂದು ಸಣ್ಣ ಮನೆ ಕಂಡಿತು. ಅದೇ ಪೊರ್ಬುಗಳ ಮನೆ ಇರಬೇಕು ಅನ್ನುತ್ತಾ ಅಲ್ಲಿಗೆ ಹೋದ.

